ಎಲ್ಲವೂ ಸುಲಲಿತವಾಗಿ ನಡೆಯುತ್ತಿರುವ ಹೊತ್ತಿನಲ್ಲೇ ಗಂಗಾಧರ ಮಾಡಿದ ಯಡವಟ್ಟು ಅವನನ್ನು ಹತ್ತು ವರ್ಷಗಳ ಹಿಂದೆ ಬೆಂಗಳೂರೆಂಬ ಈ ಮಹಾನಗರಕ್ಕೆ ತಂದು ಬಿಟ್ಟಿತ್ತು. ನಡೆದದ್ದಿಷ್ಟು– ಊರ ಪಟೇಲರ ಮಗಳು ಸರೋಜಿನಿ ಹತ್ತನೇ ತರಗತಿ ಪಾಸಾದಾಗ ಪಟೇಲರ ಹೆಂಡತಿ, 'ಮಗಳು ಪಾಸಾದರೆ ಸತ್ಯನಾರಾಯಣ ಕತೆ ಓದಿಸುತ್ತೇನೆ' ಎಂದು ಬೇಡಿಕೊಂಡಿದ್ದ ಹರಕೆ ತೀರಿಸುವುದಕ್ಕಾಗಿ ರಂಗಾಚಾರ್ಯರನ್ನು ಪೂಜೆಗಾಗಿ ಮನೆಗೆ ಆಹ್ವಾನಿಸಿದ್ದರು. ಆ ದಿನ ತುರ್ತಾಗಿ ಭಾವನ ಮಗಳ ಸೀಮಂತದ ಕಾರ್ಯಕ್ಕೆಂದು ಕುಟುಂಬ ಸಮೇತರಾಗಿ ಊರಿಗೆ ಹೊರಟು ನಿಂತಿದ್ದ ರಂಗಾಚಾರ್ಯರಿಗೆ ಧರ್ಮಸಂಕಟಕ್ಕಿಟ್ಟುಕೊಂಡಿತು. ಸಮಯ ಸಂದರ್ಭ ಎದುರಾದಾಗಲೆಲ್ಲ ಪಟೇಲರಿಂದ ಹಣಕಾಸಿನ ನೆರವು ಪಡೆಯುತ್ತಿದ್ದ ಆಚಾರ್ಯರಿಗೆ ಊರಿನಲ್ಲಿ ಒಂದು ಆಸರೆ ಅಂತ ಇದ್ದದ್ದು ಪಟೇಲರೊಬ್ಬರೆ. ಕೊನೆಗೆ ಹೆಂಡತಿಯೊಡನೆ ಚರ್ಚಿಸಿ ಒಂದು ನಿರ್ಧಾರಕ್ಕೆ ಬಂದ ರಂಗಾಚಾರ್ಯರು ಮಗ ಗಂಗಾಧರನನ್ನು ಪಟೇಲರ ಮನೆಯ ಸತ್ಯನಾರಾಯಣ ಪೂಜೆಗೆ ಕಳುಹಿಸಿ ತಾವು ಹೆಂಡತಿ ಮತ್ತು ಹೆಣ್ಣುಮಕ್ಕಳೊಂದಿಗೆ ಭಾವನ ಊರಿಗೆ ಹೊರಟು ಬಂದಿದ್ದರು.

ಅಂದು ಬೆಳಗ್ಗೆ ದೇವಸ್ಥಾನದಿಂದ ನೇರವಾಗಿ ಪಟೇಲರ ಮನೆಗೆ ಪೂಜೆಗೆಂದು ಬಂದ ಗಂಗಾಧರನಿಗೆ ಮನೆಯ ಹೆಬ್ಬಾಗಿಲಲ್ಲಿ ರಂಗೋಲಿ ಬಿಡಿಸುತ್ತಿದ್ದ ಸರೋಜಿನಿಯ ದರ್ಶನವಾಯಿತು. ಈ ಸರೋಜಿನಿ ಶಾಂತವೀರಪ್ಪ ಪಟೇಲರ ನಾಲ್ಕು ಗಂಡುಮಕ್ಕಳ ನಂತರ ಹುಟ್ಟಿದ ಏಕಮಾತ್ರ ಹೆಣ್ಣುಸಂತಾನ. ಸರೋಜಿನಿ ಸ್ಫುರದ್ರೂಪಿ ಹೆಣ್ಣು. ಬೆಳದಿಂಗಳ ಬಣ್ಣದ ದೇಹ ಕಾಂತಿ, ಒತ್ತಾದ ಕಪ್ಪು ತಲೆಗೂದಲು, ತಿದ್ದಿ ತೀಡಿದ ಹುಬ್ಬು, ವಿಶಾಲ ನೇತ್ರಗಳು, ನೀಳ ಮೂಗು, ತುಂಬಿದೆದೆ, ಸಣ್ಣ ನಡು, ಬಾಳೆದಿಂಡಿನಂತಹ ಕಾಲುಗಳು ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನ್ನುವಷ್ಟು ರೂಪವತಿ. ದಾರಿಯಲ್ಲಿ ಅವಳು ನಡೆದು ಹೋಗುತ್ತಿದ್ದರೆ ಅವಳೆದೆಯ ಕುಲುಕಾಟಕ್ಕೆ ಯುವಕರಿರಲಿ ವಯಸ್ಸಾದವರ ಎದೆ ಕೂಡ ಝಲ್ ಎನ್ನುತ್ತಿತ್ತು. ಸರೋಜಿನಿಯನ್ನು ನೋಡಿದ್ದೆ ಗಂಗಾಧರನ ಎದೆಯಲ್ಲಿ ಪ್ರೇಮಗೀತೆ ಪಲ್ಲವಿಸತೊಡಗಿತು.

ಪೂಜೆಗೆ ಬೇಕಾದ ಸಾಮಗ್ರಿಗಳನ್ನು ಕೊಡಲು ಸರೋಜಿನಿ ದೇವರ ಕೋಣೆಯ ಹತ್ತಿರ ನಾಲ್ಕಾರು ಬಾರಿ ಸುಳಿದಾಡಿದಳು. ಪೂಜಾಸಾಮಗ್ರಿಗಳನ್ನು ತೆಗೆದುಕೊಳ್ಳುವ ನೆಪದಲ್ಲಿ ಗಂಗಾಧರ ಅವಳ ಬೆರಳುಗಳಿಗೆ ತನ್ನ ಬೆರಳುಗಳನ್ನು ತಾಕಿಸಿದ. ಒಂದೆರಡು ಸಲ ಕಣ್ಣಲ್ಲಿ ಕಣ್ಣಿಟ್ಟು ನೋಡಿ ಕಣ್ಣು ಮಿಟುಕಿಸಿದ. ಗಂಗಾಧರನ ಈ ಯಾವ ಚೇಷ್ಟೆಗಳಿಗೂ ಸರೋಜಿನಿ ಪ್ರತಿಕ್ರಿಯಿಸದೆ ಮೌನವಾಗಿದ್ದಳು. ಸರೋಜಿನಿಯ ಮೌನವನ್ನು ಸಮ್ಮತಿಯೆಂದು ಭಾವಿಸಿದ ಗಂಗಾಧರ ದೇವರ ಕೋಣೆಯಲ್ಲಿ ಮಂಟಪದೆದುರು ರಂಗೋಲಿ ಬಿಡಿಸಿ ಮೇಲೇಳುತ್ತಿದ್ದವಳನ್ನು ಹಿಂದಿನಿಂದ ಬಂದು ಬಿಗಿದಪ್ಪಿ ಕೆನ್ನೆಗೆ ಮುತ್ತಿಟ್ಟ. ಅಪ್ರತಿಭಳಾದ ಸರೋಜಿನಿ ಕಿಟಾರನೆ ಕಿರುಚಿಕೊಂಡಳು. ಕ್ಷಣಾರ್ಧದಲ್ಲಿ ಪಟೇಲರ ಇಡೀ ಕುಟುಂಬ ದೇವರ ಕೋಣೆಯಲ್ಲಿ ಸೇರಿತ್ತು. ಸರೋಜಿನಿಯ ಹಿರಿಯಣ್ಣ ಗಂಗಾಧರನ ಕೆನ್ನೆಗೆ ಎರಡೇಟು ಬಿಗಿದ. ಶಾಂತವೀರಪ್ಪ ಪಟೇಲರು ಮನೆಯ ಮರ್ಯಾದೆ ಬೀದಿಪಾಲಾಗುವುದು ಬೇಡವೆಂದು ಮುಂದೆ ಬಂದು ತಡೆಯದೆ ಹೋಗಿದ್ದರೆ ಅಂದು ಗಂಗಾಧರ ಬದುಕುಳಿಯುವುದೆ ಕಷ್ಟಸಾಧ್ಯವಾಗಿತ್ತು. ಊರಿನಿಂದ ಹಿಂದಿರುಗಿದ ರಂಗಾಚಾರ್ಯರನ್ನು ಮನೆಗೆ ಕರೆಕಳುಹಿಸಿ ಪಟೇಲರು ಆದ ಪ್ರಕರಣವನ್ನು ತಿಳಿಸಿ ಮಗನನ್ನು ಬೇರೆ ಊರಿಗೆ ಕಳುಹಿಸುವಂತೆ ಸೂಚನೆ ನೀಡಿದ್ದರು. ರಂಗಾಚಾರ್ಯರ ದೈನ್ಯ ಅವಸ್ಥೆಯನ್ನು ನೋಡಿ ಕನಿಕರಪಟ್ಟು ಪಟೇಲರೆ ಬೆಂಗಳೂರಿನಲ್ಲಿರುವ ತಮ್ಮ ಸ್ನೇಹಿತ ಪುರಂದರಗೌಡರ ಲಾಡ್ಜಿನಲ್ಲಿ ಮ್ಯಾನೇಜರ್ ಕೆಲಸ ಕೊಡಿಸಿ ಗಂಗಾಧರನನ್ನು ಊರಿನಿಂದ ಸಾಗಹಾಕಿದ್ದರು.

ಈಗ ಪಟೇಲರು ಹಿಂದಿನದನ್ನೆಲ್ಲ ಮರೆತಿರುವರು. ಗಂಡ–ಮಕ್ಕಳು ಎಂದು ತನ್ನ ಸಂಸಾರದ ತಾಪತ್ರಯಗಳಲ್ಲಿ ಮುಳುಗಿರುವ ಸರೋಜಿನಿಗೆ ಅಂದಿನ ಘಟನೆಯನ್ನು ನೆನಪಿಸಿಕೊಳ್ಳುವಷ್ಟು ಪುರಸೊತ್ತೂ ಇಲ್ಲ. ರಂಗಾಚಾರ್ಯರು ತಮ್ಮ ನಾಲ್ವರು ಹೆಣ್ಣುಮಕ್ಕಳ ಮದುವೆ ಮಾಡಿ, ಹತ್ತಿರದ ಸಂಬಂಧದಲ್ಲಿ ಅನುರೂಪಳಾದ ಕಮಲಾಕ್ಷಿಯನ್ನು ಗಂಗಾಧರನಿಗೆ ಜೊತೆ ಮಾಡಿ ತಮ್ಮ ಎಲ್ಲ ಜವಾಬ್ದಾರಿಗಳಿಂದ ಋಣಮುಕ್ತರಾಗಿರುವರು. ಹೆಂಡತಿಯನ್ನು ಕರೆತಂದು ಮಹಾನಗರದಲ್ಲಿ ಪುಟ್ಟ